**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 230/2017 ಸಿ.ಡಬ್ಲ್ಯೂ –10 ಪಿ.ಡಬ್ಲ್ಯೂ -09

| | | |
|---|---|---|
| ಹೆಸರು | ಃ | ಪ್ರಕಾಶ |
| ತಂದೆಃ ಗಂಡ | ಃ | ದೇವಿಂದ್ರಪ್ಪ ಕಾಂಬಳೆ |
| ವಯಸ್ಸು | ಃ | ೩೭ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಬಂಗರಗಾ |

ದಿನಾಂಕಃ ೦೮.೦೪.೨೦೨೫

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಆರೋಪಿ ನಂ.೧ ನನ್ನ ಸಹೋದರಿಯ ಗಂಡ, ಆರೋಪಿ ನಂ.೨ ಮತ್ತು ೩ ನನ್ನ ಸಹೋದರಿಯ ಅತ್ತೆ- ಮಾವ. ಚಾಸಾ-೧ ನನ್ನ ಸಹೋದರಿ. ಚಾಸಾ-೪, ೫ ನನ್ನ ತಂದೆ ತಾಯಿ, ಚಾಸಾ-೬ ನನ್ನ ಚಿಕ್ಕಮ್ಮ, ಚಾಸಾ-2, 3, 7, 8, 9, 11, 12 ರವರ ಪರಿಚಯ ಇರುತ್ತದೆ.

ಚಾಸಾ-೧ ರವರಿಗೆ ಆರೋಪಿ ನಂ.೧ ರಿಂದ ೩ ರವರು ಮದುವೆ ನಂತರ ಸ್ವಲ್ಪ ದಿನ ಸರಿಯಾಗಿ ಇಟ್ಟುಕೊಂಡು ನಂತರ ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಡಲು ಪ್ರಾರಂಭಿಸಿದರು. ಏ ರಂಡಿ ಬೋಸಡಿ ನಿನಗೆ ಅಡುಗೆ ಸರಿಯಾಗಿ ಮಾಡಲು ಬರುವುದಿಲ್ಲ ಎಂದು ಹೇಳಿ ಹೊಡೆ ಬಡೆ ಮಾಡಿ ಮನೆ ಬಿಟ್ಟು ಹೊರ ಹಾಕಿರುತ್ತಾರೆ. ರಾತ್ರಿಯೆಲ್ಲ ಹೊರ ಹಾಕಿ ಬೆಳಿಗ್ಗೆ ಒಳಗಡೆ ಕರೆದುಕೊಂಡಿರುತ್ತಾರೆ. ಸದರಿ ವಿಷಯವನ್ನು ನನಗೆ, ಚಾಸಾ-೪ ಮತ್ತು ೫ ರವರಿಗೆ ತಿಳಿಸಿರುತ್ತಾರೆ. ನಂತರ ನಾನು ಚಾಸಾ-೪, ೫, ೭, ೮ ರವರು ಆರೋಪಿತರ ಮನೆಗೆ ಹೋಗಿ ಪಂಚಾಯತಿ ಮಾಡಿ ಬುದ್ದಿವಾದ ಹೇಳಿ ಬಂದಿರುತ್ತೇವೆ. ಆರೋಪಿ ನಂ.೧ ರವರು ಚಾಸಾ-೧ ರವರಿಗೆ ಮೋಟರ್ ಸೈಕಲ ತೆಗೆದುಕೊಂಡು ಬಾ, ಹಣ ತೆಗೆದುಕೊಂಡು ಬಾ ಎಂದು ಕಿರುಕುಳ ನೀಡುತ್ತಿದ್ದರು, ಆದರೂ ಚಾಸಾ-೧ ರವರು ಸಹಿಸಿಕೊಂಡು ಗಂಡನ ಮನೆಯಲ್ಲಿಯೇ ಇದ್ದರು. ಚಾಸಾ-೧ ರವರು ಮೊದಲನೇಯ ಹೆರಿಗೆಗಾಗಿ ನಮ್ಮ ಮನಗೆ ಬಂದರು. ಚಾಸಾ-೧ ರವರ ಹೆರಿಗೆ ತವರು ಮನೆಯಲ್ಲಿಯೇ ಆಗಿರುತ್ತದೆ. ಸದರಿ ಹೆರಿಗೆ ವಿಷಯವನ್ನು ಆರೋಪಿತರಿಗೆ ತಿಳಿಸಿರುತ್ತೇವೆ, ಆದರೆ ಆರೋಪಿತರು ಮಗುವನ್ನು ನೋಡಲು ಬಂದಿರುವುದಿಲ್ಲ. ದಿ.09.09.2016 ರಂದು ನಾನು ಮತ್ತು ಚಾಸಾ-೫ ರವರು ನಮ್ಮ ಹೊಲಕ್ಕೆ ಹೋಗಿದ್ದೆವು. ಸದರಿ ದಿನದಂದು ಆರೋಪಿ ನಂ.೧ ಸಾಯಂಕಾಲ 5.00 ಗಂಟೆಗೆ ನಮ್ಮ ಮನೆಗೆ ಕುಡಿದು ಬಂದಿದ್ದನು. ಬಂದು ಚಾಸಾ-೧ ರವರ ಜೊತೆಗೆ ಜಗಳ ತೆಗೆದು ಏ ರಂಡಿ ಬೋಸಡಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಮೋಟರ್ ಸೈಕಲ್ ತೆಗೆದುಕೊಂಡು ಬಾ, ಹಣ ತೆಗೆದುಕೊಂಡು ಬಾ ಎಂದು ಹೇಳಿದರೆ ಇಲ್ಲೇ ಇದ್ದಿಯಾ ಎಂದು ಅಲ್ಲೇ ಬಿದ್ದಿರುವ ರಾಡಿನಿಂದ ತಲೆಗೆ, ಎಡರೂ ಮಣಿಕಟ್ಟಿಗೆ ಹೊಡೆದನು, ಕೆಳಗೆ

ಬಿದ್ದಾಗ ಅದೇ ರಾಡಿನಿಂದ ಕಾಲುಗಳಿಗೆ ಹೊಡೆದಿರುತ್ತಾನೆ. ಸದರಿ ಚೀರಾಡುವ ಶಬ್ದ ಕೇಳಿ ಚಾಸಾ-೬ ರವರು ಬಿಡಿಸಲು ಬಂದಾಗ ಅದೇ ರಾಡಿನಿಂದ ಆರೋಪಿ ನಂ.೧ ಚಾಸಾ-೬ ರವರಿಗೆ ಬೆನ್ನ ಮೇಲೆ ಹೊಡೆದಿರುತ್ತಾನೆ. ಸದರಿ ಚೀರಾಡುವ ಶಬ್ದವನ್ನು ಕೇಳಿ ಚಾಸಾ-೯, ೧೦, ೧೧ ರವರು ಜಗಳ ಬಿಡಿಸಲು ಬಂದಿರುತ್ತಾರೆ, ಆಗ ಆರೋಪಿ ನಂ.೧ ಚೀರಾಡಿ ಚಾಸಾ-೧ ರವರಿಗೆ ನೀನು ನಮ್ಮ ಮನೆಗೆ ಬಂದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ನಾನು ಜಮೀನಿನಿಂದ ಮನೆಗೆ ಬಂದು ನೋಡಿದಾಗ ಚಾಸಾ-೧ ರವರ ತಲೆ ಒಡೆದು ರಕ್ತಗಾಯವಾಗಿತ್ತು. ಕೈ ಕಾಲುಗಳನ್ನು ನೋಡಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇನೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಗುಲಬರ್ಗಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆರೋಪಿತರು ಯಾರೂ ನೋಡಲು ಬಂದಿರುವುದಿಲ್ಲ. ನಂತರ ಪೋಲಿಸರು ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಮು.ಮಾ-೧ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಎ.ಡಿ. ವಕೀಲರಿಂದ</u>**

ಯಾವುದೇ ಘಟನೆ ನಡೆದಿರುವುದಿಲ್ಲ, ಚಾಸಾ-೧ ರವರು ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ಆರೊಪಿ ಯಾವತ್ತೂ ನಮ್ಮ ಮನೆಗೆ ಬಂದಿರುವುದಿಲ್ಲ ಚಾಸಾ-೧ ಮತ್ತು ೫ ರವರಿಗೆ ಹೊಡೆದಿರುವುದಿಲ್ಲ, ಅವಾಚ್ಯವಾಗಿ ಬೈದಿರುವುದಿಲ್ಲ ಎಂದರೆ ಸರಿ ಅಲ್ಲ. ಆರೋಪಿ ಯಾವತ್ತೂ ಸರಾಯಿಯನ್ನು ಕುಡಿದು ಚಾಸಾ-೧ ರವರನ್ನು ಹೊಡೆದಿರುವುದಿಲ್ಲ, ಚಾಸಾ-೧ ರವರಿಗೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಚಾಸಾ-೧ ರವರಿಗೆ ಆರೋಪಿ ನಂ.೧ ರಿಂದ ೩ ರವರು ಮದುವೆ ನಂತರ ಸ್ವಲ್ಪ ದಿನ ಸರಿಯಾಗಿ ಇಟ್ಟುಕೊಂಡು ನಂತರ ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಡಲು ಪ್ರಾರಂಭಿಸಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ಏ ರಂಡಿ ಬೋಸಡಿ ನಿನಗೆ ಅಡುಗೆ ಸರಿಯಾಗಿ ಮಾಡಲು ಬರುವುದಿಲ್ಲ ಎಂದು ಹೇಳಿ ಹೊಡೆ ಬಡೆ ಮಾಡಿ ಮನೆ ಬಿಟ್ಟು ಹೊರ ಹಾಕಿರುತ್ತಾರೆ, ರಾತ್ರಿಯೆಲ್ಲ ಹೊರ ಹಾಕಿ ಬೆಳಿಗ್ಗೆ ಒಳಗಡೆ ಕರೆದುಕೊಂಡಿರುತ್ತಾರೆ, ಸದರಿ ವಿಷಯವನ್ನು ನನಗೆ, ಚಾಸಾ-೪ ಮತ್ತು ೫ ರವರಿಗೆ ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ನಂತರ ನಾನು ಚಾಸಾ-೪, ೫, ೭, ೮ ರವರು ಆರೋಪಿತರ ಮನೆಗೆ ಹೋಗಿ ಪಂಚಾಯತಿ ಮಾಡಿ ಬುದ್ದಿವಾದ ಹೇಳಿ ಬಂದಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ಆರೋಪಿ ನಂ.೧ ರವರು ಚಾಸಾ-೧ ರವರಿಗೆ ಮೋಟರ್ ಸೈಕಲ ತೆಗೆದುಕೊಂಡು ಬಾ, ಹಣ ತೆಗೆದುಕೊಂಡು ಬಾ ಎಂದು ಕಿರುಕುಳ ನೀಡುತ್ತಿದ್ದರು, ಆದರೂ ಚಾಸಾ-೧ ರವರು ಸಹಿಸಿಕೊಂಡು ಗಂಡನ ಮನೆಯಲ್ಲಿಯೇ ಇದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ಚಾಸಾ-೧ ರವರ ಹೆರಿಗೆ ತವರು ಮನೆಯಲ್ಲಿಯೇ ಆಗಿರುತ್ತದೆ, ಸದರಿ ಹೆರಿಗೆ ವಿಷಯವನ್ನು ಆರೋಪಿತರಿಗೆ ತಿಳಿಸಿರುತ್ತೇವೆ, ಆದರೆ ಆರೋಪಿತರು ಮಗುವನ್ನು ನೋಡಲು ಬಂದಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ದಿ.೦೯.೦೯.೨೦೧೬ ರಂದು ನಾನು ಮತ್ತು ಚಾಸಾ-೫ ರವರು ನಮ್ಮ ಹೊಲಕ್ಕೆ ಹೋಗಿದ್ದೆವು, ಸದರಿ

ದಿನದಂದು ಆರೋಪಿ ನಂ.೧ ಸಾಯಂಕಾಲ ೫.೦೦ ಗಂಟೆಗೆ ನಮ್ಮ ಮನೆಗೆ ಕುಡಿದು ಬಂದಿದ್ದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಚಾಸಾ-೧ ರವರ ಜೊತೆಗೆ ಜಗಳ ತೆಗೆದು ಏ ರಂಡಿ ಬೋಸಡಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಮೋಟರ್ ಸೈಕಲ್ ತೆಗೆದುಕೊಂಡು ಬಾ, ಹಣ ತೆಗೆದುಕೊಂಡು ಬಾ ಎಂದು ಹೇಳಿದರೆ ಇಲ್ಲೇ ಇದ್ದಿಯಾ ಎಂದು ಅಲ್ಲೇ ಬಿದ್ದಿರುವ ರಾಡಿನಿಂದ ತಲೆಗೆ, ಎಡರೂ ಮಣಿಕಟ್ಟಿಗೆ ಹೊಡೆದನು, ಕೆಳಗೆ ಬಿದ್ದಾಗ ಅದೇ ರಾಡಿನಿಂದ ಕಾಲುಗಳಿಗೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಚೀರಾಡುವ ಶಬ್ದ ಕೇಳಿ ಚಾಸಾ-೬ ರವರು ಬಿಡಿಸಲು ಬಂದಾಗ ಅದೇ ರಾಡಿನಿಂದ ಆರೋಪಿ ನಂ.೧ ಚಾಸಾ-೬ ರವರಿಗೆ ಬೆನ್ನ ಮೇಲೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಚೀರಾಡುವ ಶಬ್ದವನ್ನು ಕೇಳಿ ಚಾಸಾ-೯, ೧೦, ೧೧ ರವರು ಜಗಳ ಬಿಡಿಸಲು ಬಂದಿರುತ್ತಾರೆ, ಆಗ ಆರೋಪಿ ನಂ.೧ ಚೀರಾಡಿ ಚಾಸಾ-೧ ರವರಿಗೆ ನೀನು ನಮ್ಮ ಮನೆಗೆ ಬಂದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನಾನು ಜಮೀನಿನಿಂದ ಮನೆಗೆ ಬಂದು ನೋಡಿದಾಗ ಚಾಸಾ-೧ ರವರ ತಲೆ ಒಡೆದು ರಕ್ತಗಾಯವಾಗಿತ್ತು, ಕೈ ಕಾಲುಗಳನ್ನು ನೋಡಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇನೆ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಗುಲಬರ್ಗಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿತರು ಯಾರೂ ನೋಡಲು ಬಂದಿರುವುದಿಲ್ಲ, ನಂತರ ಪೋಲಿಸರು ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಮು.ಮಾ-೧ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ಮರುವಿಚಾರಣೆಃ- ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ